**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No.185/2020**

| | | | |
|---|---|---|---|
| **ಸಾಕ್ಷಿಯ ಹೆಸರು** | : | **ರವೀಂದ್ರ** | **PW.5** |
| **ತಂದೆಯ ಹೆಸರು** | : | **ಬಸವರಾಜು** | **CW.3** |
| **ವಯಸ್ಸು** | : | **40 ವರ್ಷಗಳು** | |
| **ಉದ್ಯೋಗ** | : | **ವ್ಯವಸಾಯ** | |
| **ವಾಸಸ್ಥಳ** | : | **ಚಾಮಲಾಪುರ ಹೆಚ್ ಡಿ ಕೋಟೆ** | |

ದಿನಾಂಕ 24.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಮೃತ ದಾಸಶೆಟ್ಟಿ, ಎಲ್ಲ ಆರೋಪಿತರು ಗೊತ್ತು. ಈಗ್ಗೆ 6–7 ವರ್ಷಗಳ ಹಿಂದೆ ದಾಸಶೆಟ್ಟಿ ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಯಾವ ಕಾರಣಕ್ಕೆ ವಿಷ ಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡ ಎಂದರೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಪೊಲೀಸರು ನಮ್ಮ ಊರಿಗೆ ಬಂದಾಗ, ಅಂಗಡಿಯ ಬಳಿ ಒಂದು ಪಂಚನಾಮೆಗೆ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳ ಪಂಚನಾಮೆಗೆ ನನ್ನ ಸಹಿ ಪಡೆದಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–3 ಎಂದು ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಪೊಲೀಸರು ಮತ್ತೊಂದು ಪಂಚನಾಮೆಗೆ ನನ್ನ ಸಹಿ ಪಡೆದಿದ್ದು, ಅದನ್ನು

ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ- ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿತರ ನೀಡಿದ ಪ್ರಚೋದನೆಯಿಂದ ದಾಸಶೆಟ್ಟಿ ವಿಷಸೇವನೆ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆ ಬಗ್ಗೆ ದಿಃ 27-04-2016 ರಂದು ಬೆಳಗ್ಗೆ 9.30 ರಿಂದ 12.00 ಗಂಟೆ ಸಮಯದಲ್ಲಿ ನಾನು ಕೆ ಆರ್ ಆಸ್ಪತ್ರೆಗೆ ಹೋಗಿದ್ದಾಗ, ಪೊಲೀಸರು ನನ್ನ, ಚಾಸಾ-5 ಮತ್ತು 7 ರವರ ನಿಪಿ-2 ರಂತೆ ಶವ ಪಂಚನಾಮೆ ಮಾಡಿ, ಓದಿ ಹೇಳಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ.

ಅದೇ ದಿನ ಸಂಜೆ 5.30 ರಿಂದ 6.30 ಗಂಟೆ ಸಮಯದಲ್ಲಿ ದಾಸಶೆಟ್ಟಿ ಮನೆಯ ಮುಂಭಾಗ ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ನಿಪಿ-3 ರಂತೆ ಪಂಚನಾಮೆ ಮಾಡಿ ಓದಿ ಹೇಳಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ.

ದಿಃ 03-05-2016 ರಂದು ಮೃತ ದಾಸಶೆಟ್ಟಿಗೆ ಸೇರಿದ 3 ಬಟ್ಟೆಗಳನ್ನು ಹಾಗೂ 2 ದಾರಗಳನ್ನು ಪೊಲೀಸರು ಜಪ್ತಿ ಮಾಡಿ , ನಿಪಿ-4 ರಂತೆ ಪಂಚನಾಮೆ ಮಾಡಿ ಓದಿ ಹೇಳಿ ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಸದರಿ ಸಹಿ ನನ್ನದೆ ಎಂದರೆ ಸರಿಯಲ್ಲ.

ನಿಪಿ-2 ರಿಂದ 4 ರ ಪಂಚನಾಮೆಗಳ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**SC No.185/2020**
**PW.5**

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಕೆ ಸಿ ಬಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.